## ಇಲ್ಲಿಯವರೆಗೆ



ಹರಿಲಾಲ ಅಸಹಕಾರ ಚಳವಳಿಯಲ್ಲಿ ತೊಡಗಿಕೊಳ್ಳುತ್ತಿದ್ದ. ಇದಕ್ಕೂ ಮುನ್ನ ಬೆಳೆಯುತ್ತಿರುವ ಮಗಳು ರಾಮಿಯ ಮದುವೆ ಮಾಡಬೇಕು ಎಂದುಕೊಂಡಿದ್ದ. ಆದರೆ ಆತನ ವ್ಯವಹಾರ ಬಿಗಡಾಯಿಸುತ್ತಿತ್ತು. ಮದುವೆಗೆ ಬೇಕಾದ ಖರ್ಚನ್ನು ನಿಭಾಯಿಸಲು ಹರಿಲಾಲ ಅಸಮರ್ಥನಾಗಿದ್ದ. ಅಷ್ಟರಲ್ಲಿ ಹರಿಲಾಲನಿಗೆ ಮಿತ್ರನೊಬ್ಬ ಸಿಕ್ಕಿ ವ್ಯಾಪಾರ ಮಾಡುವ ಬಗ್ಗೆ ಚರ್ಚಿಸಿದ. ಆದರೆ ಬಂಡವಾಳ ಹೇಗೆ ಎಂಬ ಚಿಂತೆ. ಇದಕ್ಕೆ ಆ ಸ್ನೇಹಿತ ಶೇರು ಮಾರಾಟದಿಂದ ಹಣಕಾಸು ಪಡೆಯಬಹುದು ಎಂಬ ಸಲಹೆ ನೀಡುತ್ತಾನೆ. ಜೊತೆಗೆ ಕಾರ್ಖಾನೆ ಆರಂಭಿಸುವ ಬಗ್ಗೆಯೂ ಯೋಚಿಸುತ್ತಾರೆ. 'ಸತ್ಯಾಗ್ರಹಿ ಬ್ರದರ್ಸ್' ಬೋರ್ಡ್ ತೆಗೆದು 'ಆಲ್ ಇಂಡಿಯಾ ಸ್ಟೋರ್ಸ್' ಎಂಬ ಬೋರ್ಡ್ ಹಾಕಿ ವಹಿವಾಟು ಆರಂಭಿಸುತ್ತಾರೆ. ಹೊಸ ಸ್ನೇಹಿತರು ಸಿಗುತ್ತಾರೆ. ರಾತ್ರಿ ಸಾರಾಯಿ ಅಂಗಡಿಗೆ ಹೋಗುವುದು ಹೆಚ್ಚಾಗುತ್ತದೆ.

ಈ ಮಧ್ಯೆ ಖಿಲಾಫತ್ ಚಳವಳಿಯಲ್ಲಿ ಭಾಗವಹಿಸಿದ ಹರಿಲಾಲ ಮಸೀದಿಯ ಮುಂದೆ ಭಾಷಣ ಮಾಡುತ್ತಾನೆ. ಎಲ್ಲ ಮುಸ್ಲಿಮರೂ 'ಮಹಾತ್ಮ ಗಾಂಧೀ ಕಿ ಜೈ' ಎಂದು ಜೈಕಾರ ಹಾಕುತ್ತಾರೆ. ಎಲ್ಲರ ದೃಷ್ಟಿ ಹರಿಲಾಲನ ಮೇಲೆ ಹರಿಯುತ್ತದೆ. ಅಸಹಕಾರ ಚಳವಳಿ ಮುಂದುವರಿಯುತ್ತದೆ. ಹರಿಲಾಲನ ಕೈಗೆ ಬೇಡಿ ತೊಡಿಸಿ ಬಂಧಿಸಲಾಗುತ್ತದೆ. ಇದರಿಂದ ಹರಿಲಾಲನ ಆಲ್ ಇಂಡಿಯಾ ಸ್ಟೋರ್ಸ್‌ಗೆ ಬೀಗ ಹಾಕಲಾಗುತ್ತದೆ. ಕೆಲದಿನಗಳ ಬಳಿಕ ಹರಿಲಾಲ ಜೈಲಿನಿಂದ ಹೊರಗೆ ಬರುತ್ತಾನೆ. ಸಾಲಗಾರರು, ವಕೀಲಿಗಾರರು ಹರಿಲಾಲನನ್ನು ಸುತ್ತುವರೆಯುತ್ತಾರೆ. ಆತನ ಬಳಿ ಬಿಡಿಗಾಸೂ ಇರುವುದಿಲ್ಲ. 'ಆಲ್ ಇಂಡಿಯಾ ಸ್ಟೋರ್ಸ್ ಲಿಮಿಟೆಡ್' ಕಂಪನಿಯ ಶೇರುಗಳನ್ನು ಮುಸ್ಲಿಮ್ ಸ್ನೇಹಿತರು ಪೇಶಾವರ್‌ಗೆ ಹೋಗಿ ಮಾರಿದ್ದರಿಂದ ಹರಿಲಾಲ ಹಣವಿಲ್ಲದೆ ಒದ್ದಾಡುವಂತಾಗುತ್ತದೆ. ಹರಿಲಾಲನ ಸಾರಾಯಿ ಸಹವಾಸ, ನಿರಂತರ ನಷ್ಟದ ವಹಿವಾಟುಗಳನ್ನು ಕಂಡು ಬಾಪೂ ವಿಪರೀತ ಖೇದಗೊಳ್ಳುತ್ತಾರೆ. ತಾನು ಇಹಲೋಕ ತ್ಯಜಿಸಬೇಕು ಎನಿಸುವಷ್ಟು ನೋವು ಅನುಭವಿಸುತ್ತಾರೆ ಬಾಪೂ.

ರಾಜಕೋಟದ ಠಾಕೂರರ ಬಗ್ಗೆ ಯೋಚಿಸಿದ. ರಾಜಕೋಟದಲ್ಲಿ ಹರಿಲಾಲನಿಗೆ ಬಹಳಷ್ಟು ಜನ ಪರಿಚಿತರಿದ್ದರು. ಅಲ್ಲದೆ ಬಾಪೂ ಅವರ ಹೆಸರಿನಿಂದಾಗಿ ಗಾಂಧಿ ಪರಿವಾರಕ್ಕೆ ದೇಶವ್ಯಾಪಿ ಪ್ರತಿಷ್ಠೆ ಸಹ ಲಭಿಸಿತ್ತು. ಆದರೆ ಹರಿಲಾಲನ ಬಗ್ಗೆ ಹರಡಿದ್ದ ಸುದ್ದಿಗಳಿಂದಾಗಿ ಹರಿಲಾಲನಿಗೆ ಯಾರ ಸಹಾಯವೂ ಸಿಗುವ ಸಾಧ್ಯತೆಯಿರಲಿಲ್ಲ. ಸಂಬಂಧಿಕರೆದುರು ಕೈಚಾಚಲು ಅವನಿಗೆ ಸಂಕೋಚವಾಗುತ್ತಿತ್ತು. ತನ್ನ ಚಾಚಿದ ಕೈಗಳಲ್ಲಿ ಹಣಕ್ಕೆ ಬದಲು ಅವರು ಅವಮಾನವನ್ನು ಮಾಡಿದರೆ ಎಂಬ ಭಯ ಸದಾ ಕಾಡುತ್ತಿತ್ತು. ಬಾಪೂ ಅವರು ಸಾರ್ವಜನಿಕವಾಗಿ ಘೋಷಣೆ ಮಾಡಿದ ನಂತರ ಹರಿಲಾಲ ಬಾಪೂ ಅವರ ಮಗನಾಗಿದ್ದಾಗ್ಯೂ, ಈಗ ಅವನು ಬಾಪೂ ಅವರ ಮಗನಾಗಿರಲಿಲ್ಲ ಎಂಬುದು ಎಲ್ಲರಿಗೂ ತಿಳಿದಿತ್ತು.

ಈ ಪರಿಸ್ಥಿತಿಯಲ್ಲಿ ದೀರ್ಘ ಯೋಚನೆ ಮಾಡಿದ ನಂತರ ಹರಿಲಾಲ, ರಾಜಕೋಟದ ಠಾಕೂರರ ಬಳಿ ಸಾಧ್ಯವಾದಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆಯಬೇಕೆಂದು ನಿರ್ಧರಿಸಿದ. ಠಾಕೂರರೊಂದಿಗೆ ಹರಿಲಾಲನಿಗೆ ವೈಯಕ್ತಿಕ ಪರಿಚಯವಿರಲಿಲ್ಲ, ಆದರೆ ರಾಜಕೋಟದ ರಜವಾಡೆಯಲ್ಲಿ ಗಾಂಧಿ ಪರಿವಾರದ ಪೂರ್ವಿಕರು ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದರು; ಈ ಸೇವೆಗೆ ಪ್ರತಿಯಾಗಿ ಗಾಂಧಿ ಪರಿವಾರದ ಪೈತೃಕ ಸಂಪತ್ತಿನ ಮೇಲೆ ಬಾಪೂ ಅವರು ತಮ್ಮ ಹಕ್ಕನ್ನು ಸಾಕಷ್ಟು ಹಿಂದೆಯೇ ತ್ಯಜಿಸಿದ್ದಾರೆ, ಆದರೆ ಬಹುಶಃ ಠಾಕೂರರು ತನ್ನ ಪರಿಸ್ಥಿತಿಯನ್ನು ನೋಡಿ ತಿರಸ್ಕರಿಸಲಾರರು ಎಂದು ಯೋಚಿಸಿ ಹರಿಲಾಲ ಅವರ ಬಳಿಗೆ ಹೋದ. ಅವರ ಬಳಿ ತನ್ನ ಕಥೆಯನ್ನು ಹೇಳಿಕೊಂಡು ರೋದಿಸಿದ. ಶ್ರೀಮಂತರೊಬ್ಬರ ಬಳಿಗೆ ಹೋಗಿ ಯಾಚಿಸಿದ ಈ ಅವಕಾಶ ಮೊದಲನೆಯದಾಗಿತ್ತು. ಠಾಕೂರರು ಸಹ ಮೊದಲ ಬಾರಿಗೆ ಹರಿಲಾಲನನ್ನು ಭೇಟಿಯಾಗುತ್ತಿದ್ದರು. ಆದರೆ ಹರಿಲಾಲನ ಪೂರ್ವಿಕರು ಮಾಡಿದ ರಾಜ್ಯದ ಸೇವೆಯ ಬಗ್ಗೆ ಠಾಕೂರರು ಕೇಳಿದ್ದರು, ಅದನ್ನು ಅವರು ಮರೆತಿರಲಿಲ್ಲ. ಅಷ್ಟೇ ಅಲ್ಲ, ರಾಜ್ಯದ ಮಾಜಿ ಮಂತ್ರಿಗಳ ಪರಿವಾರದ ಓರ್ವ ಉತ್ತರಾಧಿಕಾರಿಯಾಗಿ ಬಾಪೂ ಅವರು ದೇಶದ ಕೋಟ್ಯಂತರ ಜನರ ನೇತೃತ್ವವನ್ನು ವಹಿಸುತ್ತಿದ್ದಾರೆ ಎಂಬುದು ಸಹ ಠಾಕೂರರಿಗೆ ತಿಳಿದಿತ್ತು.

'ಠಾಕೂರ್ ಸಾಹೇಬರೇ,' ಹರಿಲಾಲ ಮೆಲು ಧ್ವನಿಯಲ್ಲಿ ಹೇಳಿದ, 'ಬಾಪೂ ಅವರ ವಿಷಯವೇ ಅದ್ಭುತ. ಅವರದು ಸಾಧಕನ ಜೀವನ. ಆದರೆ ನನ್ನ ವಿಷಯ ಹಾಗಿಲ್ಲ. ನಾನು ಎಲ್ಲರ ಭಾರವನ್ನು ಹೊರಲೇಬೇಕು.'

'ನೀವು ರಾಜ್ಯದ ಪ್ರಜೆ ಮಾತ್ರವಲ್ಲ ಹರಿಲಾಲ್. ನಿಮ್ಮ ಅಜ್ಜಮುತ್ತಜ್ಜ ರಾಜ್ಯದ ಸೇವೆಯನ್ನು ಮನಸಾರೆ ಮಾಡಿದ್ದಾರೆ. ರಾಜ್ಯ ನಿಮ್ಮ ಕಷ್ಟದ ಸಮಯದಲ್ಲಿ ನಿಮ್ಮೊಂದಿಗಿರದಿದ್ದರೆ, ನಮ್ಮ ಕುಲಕ್ಕೇ ಇದು ನಾಚಿಕೆಗೇಡು.'

ಠಾಕೂರರು ಹರಿಲಾಲನಿಗೆ ಧೈರ್ಯ ಹೇಳಿದರು.

ಈಗ ಹರಿಲಾಲ ಧೈರ್ಯವಹಿಸಿ ತನ್ನೆಲ್ಲಾ ಕಥೆಯನ್ನು ಠಾಕೂರರಿಗೆ ಹೇಳಿದ. ಮಗಳ ಮದುವೆಯ ವಿಷಯವನ್ನು ಹೇಳಿದ, ಹೆಂಡತಿಯ ನಿಧನದ ಬಗ್ಗೆ ಹೇಳಿದ, ತನ್ನ ಆಕಸ್ಮಿಕ ಜೈಲುವಾಸದಿಂದಾಗಿ ಮಣ್ಣುಪಾಲಾದ ಕಂಪನಿಯ ಕಥೆಯನ್ನು ಹೇಳಿದ. ನಂತರ ಇಂಥ ಪರಿಸ್ಥಿತಿಯಲ್ಲಿ ಒಂದು ವೇಳೆ ತನಗೆ ತಕ್ಷಣ ಆರ್ಥಿಕ ಸಹಾಯ ಸಿಗದಿದ್ದರೆ ತಾನು ಹೇಗೆ ಮುಳುಗಿ ಹೋಗುತ್ತೇನೆ ಎಂದೂ ಹೇಳಿದ.

'ಹರಿಲಾಲ, ನೀವು ನಿಶ್ಚಿಂತೆಯಿಂದಿರಿ. ನಿಮ್ಮ ದುಃಖದಲ್ಲಿ ನಾನು ಸರಿಸಮನಾಗಿ ಪಾಲುದಾರನಾಗಿದ್ದೇನೆ. ಠಾಕೂರರು ಉದಾರತೆಯಿಂದ ಹೇಳಿದರು. 'ರಾಜ್ಯದಿಂದ ನಿಮಗೆ ಅಗತ್ಯವಾದ ಹಣ ಸಾಲ ಸಿಗುವಂತೆ ನಾನು ವ್ಯವಸ್ಥೆಯನ್ನು ಮಾಡುತ್ತೇನೆ.'

ಹರಿಲಾಲನಿಗೆ ಇದೇ ಬೇಕಾಗಿತ್ತು. ಮಗಳ ಮದುವೆಯ ಸಮಯದಲ್ಲಿ ಮದುವೆಯ ಶಾಸ್ತ್ರಗಳನ್ನು ಪೂರೈಸಬೇಕು, ಕೆಲವು ದಿನಗಳ ನಂತರ ತಾನು ಇಲ್ಲಿಂದ ಹೊರಡುವಾಗ ಅಲ್ಪಸ್ವಲ್ಪ ಹಣ ತನ್ನ ಬಳಿ ಇರಬೇಕು, ಆ ಹಣದಿಂದ ಸೂಕ್ತ ವಾಸಸ್ಥಳ ಸಿಗುವವರೆಗೆ ತನ್ನ ಜೀವನ ಸಾಗಬೇಕು ಎಂದೆಲ್ಲಾ ಯೋಚಿಸಿದ ಹರಿಲಾಲ ಠಾಕೂರರಿಂದ ಹತ್ತು ಸಾವಿರ ರೂಪಾಯಿಗಳನ್ನು ಸಾಲದ ರೂಪದಲ್ಲಿ ಪಡೆದ. ರಾಜ್ಯದ ಕಚೇರಿಗೆ ಠಾಕೂರರು ಈ ಬಗ್ಗೆ ಸೂಚಿಸಿದ್ದರು, ಹೀಗಾಗಿ ಅಗತ್ಯವಾದ ರುಜು, ಮೊಹರು ಎಲ್ಲಾ ಮಾಡಿಸಿಕೊಂಡ ನಂತರ ಹರಿಲಾಲನಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡಲಾಯಿತು.

### ಇಪ್ಪತ್ತೆಂಟು

ಮಗಳ ಮದುವೆಯನ್ನು ವಿಜೃಂಭಣೆಯಿಂದ ಮಾಡಿಸಿದ ನಂತರ ಹರಿಲಾಲ ಸ್ವಲ್ಪ ನಿಶ್ಚಿಂತನಾದ. ಠಾಕೂರರಿಂದ ಪಡೆದ ಸಾಲದ ಹಣದ ಬಗ್ಗೆ ಯಾರಿಗೂ ಹೇಳಲಿಲ್ಲ, ಹೀಗಾಗಿ ಮದುವೆಗೆ ಅವನು ಖರ್ಚು ಮಾಡಿದ್ದನ್ನು ನೋಡಿ ಅವರ ಪರಿವಾರದವರಿಗೆ, ಅದೂ ವಿಶೇಷವಾಗಿ ಬಲಿ ಬಹನಳಿಗೆ ತುಂಬಾ ಆಶ್ಚರ್ಯವಾಗಿತ್ತು. ಹರಿಲಾಲನಿಗೆ ಈ ವಿಷಯ ತಿಳಿದಿತ್ತು, ಇದರ ಹೊರತಾಗಿಯೂ ಅವನು ಅಗತ್ಯವಿದ್ದಲ್ಲಿ ಉದಾರತೆಯಿಂದ ಎಲ್ಲಾ ವಿಧಿವಿಧಾನಗಳನ್ನು ನೆರವೇರಿಸಿದ. ಉಳಿದ ಮಕ್ಕಳು ಸಹ ದೊಡ್ಡವರಾಗಿದ್ದರು. ಈಗ ಅವರು ತಿಳಿವಳಿಕೆಯ ಹಂತಕ್ಕೆ ಕಾಲಿಟ್ಟಿದ್ದರು. ಎಲ್ಲರೊಂದಿಗೆ ಇರುವ ಸುಖ ಹರಿಲಾಲನಿಗೆ ದೀರ್ಘ ಸಮಯದ ನಂತರ ಲಭಿಸಿತ್ತು. ಆದರೆ ಈ ಸುಖದ ನಡುವೆ ಒಂದು ವಿಷಯ ಮಾತ್ರ ಅವನ ಗಮನಕ್ಕೆ ಬಂದಿರಲಿಲ್ಲ. ಬಲಿ ಬಹನ್ ಮಕ್ಕಳ ಬಗ್ಗೆ ಗಮನವನ್ನು ಕೊಡುತ್ತಿದ್ದಳು, ಆದರೆ ಹರಿಲಾಲನ ಸ್ವಭಾವ